**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

**ಸಿಸಿ ನಂ.30/2025**

**ಫಿರ್ಯಾದುದಾರರುಃ** ಶ್ರೀ ಅವಿನಾಶ್ ಹೆಚ್.ಕೆ. ಬಿನ್ ಕೃಷ್ಣೇಗೌಡ ಹೆಚ್ .ಬಿ.
ವಯಸ್ಸು 34ವರ್ಷ, ವಾಸಃ ಹೆಗ್ಗಂದೂರು ಗ್ರಾಮ,
ಹನಗೋಡು ಅಂಚೆ ಮತ್ತು ಹೋಬಳಿ,
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

**– ವಿರುದ್ಧ –**

**ಆರೋಪಿಃ** ಶ್ರೀಮತಿ ಶಶಿಕಲಾ, ಕೋಂ ಮಂಜುನಾಥ ಜೋಶಿ,
ವಯಸ್ಸು 36ವರ್ಷ, ವಾಸಃ ಮಾರಿಗುಡಿ ಬೀದಿ,
ವಾರ್ಡ್ ನಂ.19, ಹುಣಸೂರು ಪಟ್ಟಣ,
ಮೈಸೂರು ಜಿಲ್ಲೆ

**ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆಯ ಕಲಂ 351 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

| | |
|---|---|
| ಪ್ರಶ್ನೆ 1: | ಫಿರ್ಯಾದುದಾರರಾದ ಅವಿನಾಶ್ ಹೆಚ್.ಕೆ ರವರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ? |
| ಉತ್ತರ: | ತಿಳಿಯಿತು |
| ಪ್ರಶ್ನೆ 2: | ಪಿ.ಡಬ್ಲ್ಯೂ1 ಅವಿನಾಶ್ ಹೆಚ್.ಕೆರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಮತ್ತು ಅವರು ಹಲವಾರು ವರ್ಷಗಳಿಂದ ಪರಿಚಯಸ್ಥರಾಗಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 3: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನೀವು ಅವರಿಂದ ಜುಲೌ 2024 ರಲ್ಲಿ ನಿಮ್ಮ ಕಾನೂನುಬದ್ದ ಅವಶ್ಯಕತೆಗಾಗಿ ಅಂದರೆ ನಿಮ್ಮ ಬ್ಯೂಟಿ ಪಾರ್ಲರ್ ಗೆ ಅವಶ್ಯಕ ವಸ್ತುಗಳನ್ನು ಖರೀದಿಸುವ ಸಲುವಾಗಿ ಹಾಗು ಹಿಂದಿನ ಸಾಲಗಳನ್ನು ತೀರಿಸಲು ರೂ.4,80,000/–ಗಳನ್ನು ಮೂರು ತಿಂಗಳ ಒಳಗೆ ಮರುಪಾವತಿಸುವುದಾಗಿ ಹೇಳಿ ಸಾಲವಾಗಿ ಪಡೆದುಕೊಂಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ:4 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಸಾಲದ ತೀರುವಳಿಗಾಗಿ ದಿನಾಂಕ 21.10.2024 ರಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಹುಣಸೂರು ಶಾಖೆಯ ಚೆಕ್ ಸಂಃ 023924 ಅನ್ನು ರೂ.4,80,000/- ಕ್ಕೆ ಫಿರ್ಯಾದುದಾರರಿಗೆ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ |
| ಉತ್ತರ: | ಸುಳ್ಳು |
| ಪ್ರಶ್ನೆ 5: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಚೆಕ್ ಅನ್ನು ಅವರು ತಮ್ಮ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹುಣಸೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ " ಎಂಬ ಕಾರಣಕ್ಕೆ ಸದರಿ ಚೆಕ್ ದಿನಾಂಕಃ 14.11.2024 ರಂದು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 6: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಬಗ್ಗೆ ದಿನಾಂಕ 30.11.2024 ರಂದು ಅವರು ನಿಮಗೆ ತಮ್ಮ ವಕೀಲರ ಮೂಲಕ ನೊಂದಾಯಿತ ಅಂಚೆಯ ಮೂಲಕ ನೋಟೀಸನ್ನು ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಹೌದು |
| ಪ್ರಶ್ನೆ 7: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ನೋಟೀಸ್ ದಿನಾಂಕ 02.12.2024 ರಂದು ನಿಮಗೆ ಜಾರಿಯಾಗಿದ್ದರೂ ಸಹ ನೀವು ಉದ್ದೇಶಪೂರ್ವಕವಾಗಿ ಫಿರ್ಯಾದುದಾರರಿಗೆ ನೀಡಬೇಕಾದ ಚೆಕ್ಕಿನ ಹಣವನ್ನು ಮರುಪಾವತಿಸಿಲ್ಲ ಹಾಗು ನೋಟೀಸಿಗೆ ಉತ್ತರವನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಉತ್ತರ ಕಳುಹಿಸಿದ್ದೇನೆ |
| ಪ್ರಶ್ನೆ 8: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆದರೂ ಸಹ ನೀವು ಈವರೆಗೂ ಸಾಲದ ಹಣವನ್ನು ಮರುಪಾವತಿಸದೆ ಇರುವುದರಿಂದ ನೆಗೋಶಿಯೇಬಲ್ ಇನ್ಸ್ಟ್ರುಮೆಂಟ್ಸ್ ಕಾಯಿದೆಯ ಕಲಂ 138ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 9: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀವು ಅವರಿಗೆ ನೀಡಿದ ಚೆಕ್, ಬ್ಯಾಂಕಿನವರು ನೀಡಿದ ಹಿಂಬರಹ, ವಕೀಲರ ಮೂಲಕ ನೀಡಿದ ನೋಟೀಸಿನ ಕಚೇರಿ ಪ್ರತಿ, ಅಂಚೆ ರಶೀದಿ ಮತ್ತು ಅಂಚೆ ಸ್ವೀಕೃತಿ ಪತ್ರವನ್ನು ನಿಪಿ-1 ರಿಂದ ನಿಪಿ-5 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 10: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಇದೆ |
| ಪ್ರಶ್ನೆ 11: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |
| ಉತ್ತರ: | ಇದೆ |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 08.10.2025

Sd/-

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ಆರೋಪಿಯ ಸಹಿಃ